■ ವಿಶಾಖ ಎನ್.



# ರಣಬೀರ್ ಶ್ರೇಷ್ಠ ನಟ: ಮಹೇಶ್ ಬಾಬು ಶ್ಲಾಘನೆ

'ಭಾರತದ ಶ್ರೇಷ್ಠ ನಟರ ಸಾಲಿಗೆ ರಣಬೀರ್ ಕಪೂರ್ ಸೇರುತ್ತಾರೆ' – ಇಂತಹ ಹೊಗಳಿಕೆ ತೇಲಿಬಿಟ್ಟವರು ತೆಲುಗಿನ ಸೂಪರ್‌ಸ್ಟಾರ್ ಮಹೇಶ್ ಬಾಬು.

'ಅನಿಮಲ್' ಹಿಂದಿ ಸಿನಿಮಾ ಡಿಸೆಂಬರ್ 1ರಂದು ತೆರೆಕಂಡಿದೆ. ಅದಕ್ಕೂ ಮೊದಲು ಚಿತ್ರತಂಡ ದೆಹಲಿಯಲ್ಲಿ ದೊಡ್ಡ ಸಮಾರಂಭ ಮಾಡಿ, ಟ್ರೈಲರ್ ಬಿಡುಗಡೆ ಮಾಡಿತು. ಅದಾದ ಮೇಲೆ ಬೆಂಗಳೂರು ಹಾಗೂ ಹೈದರಾಬಾದ್‌ನಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಿತು. ಹೈದರಾಬಾದ್‌ನ ಪ್ರಚಾರ ಕಾರ್ಯಕ್ರಮದಲ್ಲಿ ಮಹೇಶ್‌ಬಾಬು ಹಾಗೂ ನಿರ್ದೇಶಕ ರಾಜಮೌಳಿ ಹಾಜರಿ ಇದ್ದುದು ಬೋನಸ್ಸು. ರಣಬೀರ್ ಕಪೂರ್, ನಿರ್ದೇಶಕ ರಾಜಮೌಳಿ ಅವರ ಪಾದಸ್ಪರ್ಶಿಸಿ ನಮಸ್ಕರಿಸಿದರು. ಮಹೇಶ್ ಬಾಬು ಹಾಗೂ ರಣಬೀರ್ ಇಬ್ಬರೂ ಮುಖಾಮುಖಿಯಾಗಿ ಹೈವೋಲ್ಟೇಜ್ ನಗು ತುಳುಕಿಸಿದರು.

'ಒಕ್ಕಡು' ಸಿನಿಮಾ ನೋಡಿದ್ದಾಗ ತಾವು ಮೆಚ್ಚುಗೆ ಸೂಚಿಸಿ ಚುಟುಕು ಸಂದೇಶವೊಂದನ್ನು ಮೊಬೈಲ್‌ಗೆ ಕಳುಹಿಸಿದ್ದನ್ನು ರಣಬೀರ್ ಸ್ಮರಿಸಿಕೊಂಡರು. ತಮ್ಮ ಬದುಕಿನಲ್ಲಿ ಸೂಪರ್‌ಸ್ಟಾರ್ ಒಬ್ಬರಿಗೆ ಸಂದೇಶ ಕಳುಹಿಸಿದ್ದು ಅದೇ ಮೊದಲಂತೆ. ಅದಕ್ಕೆ ಸಂಕೋಚದಿಂದಲೇ ಮಹೇಶ್ ಬಾಬು, 'ಥ್ಯಾಂಕ್ಸ್ ಫಾರ್ ಯುವರ್ ಸಪೋರ್ಟ್ ಸರ್' ಎಂದು ಪ್ರತಿಕ್ರಿಯೆ ನೀಡಿದ ಸಂಗತಿಯೂ ಹೊರಬಂದಿತು.

ಹೀಗೆ ಪರಸ್ಪರ ಮೆಚ್ಚುಗೆಯ ಮಾತುಗಳನ್ನು ಆಡುತ್ತಿದ್ದ ಸಂದರ್ಭದಲ್ಲೇ ಮಹೇಶ್ ಬಾಬು ತಮ್ಮಿಷ್ಟದ ರಣಬೀರ್ ಸಿಂಗ್ ಕುರಿತು ಗುಣವಿಶೇಷಣಗಳನ್ನು ಹೊರಹಾಕಿದ್ದು. 'ನಾನು ರಣಬೀರ್ ಕಪೂರ್ ದೊಡ್ಡ ಅಭಿಮಾನಿ. ಭಾರತದಲ್ಲಿ ಅವರು ಈಗಿನ ಶ್ರೇಷ್ಠ ನಟ. ಹಿಂದೆಯೂ ನಾನು ಅಭಿಮಾನಿ ಎಂದು ಅವರಿಗೆ ಹೇಳಿದ್ದೆ. ಆದರೆ, ಅದನ್ನು ಅವರು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ' ಎಂದು ಮಹೇಶ್ ಬಾಬು ತಮ್ಮ ಸಿಗ್ನೇಚರ್ ಮುಗ್ಧನಗು ತುಳುಕಿಸುತ್ತಾ ಹೇಳಿದರು.

ಅನಿಲ್ ಕಪೂರ್, ರಶ್ಮಿಕಾ ಮಂದಣ್ಣ, ಬಾಬ್ಬಿ ಡಿಯೋಲ್ ಅಭಿನಯದ 'ಅನಿಮಲ್' ಸಿನಿಮಾದ ಟ್ರೈಲರ್‌ಗೆ ಅತ್ಯುತ್ತಮ ಸ್ಪಂದನ ದೊರಕಿತ್ತು. ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಎಷ್ಟೆಲ್ಲ ವಹಿವಾಟು ನಡೆಸಲಿದೆ ಎನ್ನುವ ಕುತೂಹಲವಿದೆ. ■

# ಛಪಾಕ್ ಗಳಿಕೆಗೂ ದೀಪಿಕಾ ಜೆಎನ್‌ಯು ಭೇಟಿಗೂ ಸಂಬಂಧವಿತ್ತು...

ಕೋವಿಡ್ ಮೊದಲ ಅಲೆ ಏಳುವ ಮುಂಚೆ ಭಾರತದಲ್ಲಿ ತೆರೆಕಂಡಿದ್ದ ಹಿಂದಿ ಚಿತ್ರ 'ಛಪಾಕ್' ನಿರೀಕ್ಷಿತ ಯಶಸ್ಸು ಕಂಡಿರಲಿಲ್ಲ. ಚಿತ್ರ ಬಿಡುಗಡೆಯಾಗುವ ಮೂರು ದಿನ ಮೊದಲು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯುನಲ್ಲಿ) ನಡೆಯುತ್ತಿದ್ದ ಪ್ರತಿಭಟನೆಗೆ ದೀಪಿಕಾ ಭೌತಿಕವಾಗಿ ಸಾಥ್ ನೀಡಿದ್ದರಿಂದ ಸಿನಿಮಾ ಗಳಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಯಿತು ಎಂದು ನಿರ್ದೇಶಕಿ ಮೇಘನಾ ಗುಲ್ಜಾರ್ ಇತ್ತೀಚೆಗೆ ಒಪ್ಪಿಕೊಂಡರು.

'ಸಿಟಿಜನ್‌ಶಿಪ್ ಅಮೆಂಡ್‌ಮೆಂಟ್ ಆ್ಯಕ್ಟ್' (ಸಿಎಎ) ವಿರುದ್ಧ ಜೆಎನ್‌ಯುನಲ್ಲಿ ನಡೆಯುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಜನವರಿ ತಿಂಗಳಲ್ಲಿ ದೀಪಿಕಾ ಭೇಟಿ ನೀಡಿದ್ದರು. ಅವರಿಗೆ ಬೆಂಬಲ ಸೂಚಿಸಿದ್ದರು. ಅದೇ ವಾರದಲ್ಲಿ 'ಛಪಾಕ್' ಸಿನಿಮಾ ಬಿಡುಗಡೆಯಾಯಿತು. ಆ್ಯಸಿಡ್ ದಾಳಿಗೆ ತುತ್ತಾಗಿ ಬದುಕು ಕಟ್ಟಿಕೊಂಡಿದ್ದ ಲಕ್ಷ್ಮೀ ಅಗರ್‌ವಾಲ್ ಅವರ ಹೋರಾಟದ ಕಥನದ ವಸ್ತುವಿನ ಸಿನಿಮಾ 'ಛಪಾಕ್'. ದೀಪಿಕಾ ಆ ಸಂದರ್ಭದಲ್ಲಿ ಜೆಎನ್‌ಯುಗೆ ಭೇಟಿ ನೀಡಿದ್ದನ್ನು ಅನೇಕರು ವಿರೋಧಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್‌ಗಳನ್ನು ಹಾಕಿದರು. ಆ ಭರಾಟೆಯಲ್ಲಿ 'ಸಿನಿಮಾ ನೋಡದಿರಿ' ಎಂದೂ ಪ್ರಚಾರ ಮಾಡಿದರು. ಚಿತ್ರದ ವಸ್ತುವಿಗೂ ಪ್ರತಿಭಟನೆಗೂ ಏನೇನೂ ಸಂಬಂಧ ಇರಲಿಲ್ಲ. ಮಾನವೀಯ ವಸ್ತುವಿನ ಚಿತ್ರದ ಬಗೆಗೆ ಚರ್ಚೆಯಾಗುವ ಬದಲು ಅದು ಇನ್ನೆಲ್ಲಿಗೋ ಹೋಯಿತು. ಇದು ಸಿನಿಮಾ ಗಳಿಕೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿತು ಎಂದು ಮೇಘನಾ ಬಿಡಿಸಿ ಹೇಳಿದರು.

ಫಾಕ್ಸ್ ಸ್ಟಾರ್ ಸ್ಟುಡಿಯೋಸ್, ಗೋವಿಂದ್ ಸಿಂಗ್ ಸಂಧು, ಮೇಘನಾ ಗುಲ್ಜಾರ್ ಹಾಗೂ ದೀಪಿಕಾ ಪಡುಕೋಣೆ ಆ ಚಿತ್ರದ ನಿರ್ಮಾಪಕರಾಗಿದ್ದರು. ದೀಪಿಕಾ ನಿರ್ಮಾಣದ ಮೊದಲ ಚಿತ್ರ ಎನ್ನುವ ಅಗ್ಗಳಿಕೆಯೂ ಅದಕ್ಕೆ ಇತ್ತು. 50 ಕೋಟಿ ರೂಪಾಯಿ ಬಜೆಟ್‌ನಲ್ಲಿ ತಯಾರಾಗಿದ್ದ ಚಿತ್ರವು 55.5 ಕೋಟಿ ರೂಪಾಯಿ ಮಾತ್ರ ಗಳಿಸಲು ಸಾಧ್ಯವಾಯಿತು.

ಈಗ ಮೇಘನಾ ಗುಲ್ಜಾರ್ 'ಸ್ಯಾಮ್ ಬಹಾದುರ್' ಹಿಂದಿ ಸಿನಿಮಾ ನಿರ್ದೇಶಿಸಿದ್ದಾರೆ. ಫೀಲ್ಡ್ ಮಾರ್ಷಲ್ ಸ್ಯಾಮ್ ಮಣೇಕ್ ಷಾ ಅವರ ಬದುಕಿನ ಕಥಾನಕವನ್ನು ಒಳಗೊಂಡ ಚಿತ್ರವಿದು. ವಿಕ್ಕಿ ಕೌಶಲ್ ಮಣೇಕ್ ಷಾ ಪಾತ್ರದಲ್ಲಿ ಅಭಿನಯಿಸಿದ್ದಾರೆ. ■

